ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಒಟ್ಟು ಪ್ರದೇಶ 15.30 ಲಕ್ಷ ಹೆಕ್ಟೇರ್‌ಗಳು.

ಆ) ಮಾವು, ವೆನಿಲ್ಲಾ, ಕಲ್ಲಂಗಡಿ, ದ್ರಾಕ್ಷಿ, ದಾಳಿಂಬೆ, ಪಪ್ಪಾಯಿ, ಕದಂಬ ಹಣ್ಣು, ಗುಲಾಬಿ ಈರುಳ್ಳಿ, ಮಿಡಿ ಸೌತೇಕಾಯಿ, ಆಲೂಗೆಡ್ಡೆ, ಗೋಡಂಬಿ, ಅರಶಿನ, ಹೂಗಳು, ಅಣಬೆ ಸಂಸ್ಕರಿಸಿ ಇತರೇ ಪದಾರ್ಥಗಳು ಮತ್ತು ಸಾಂಬಾರು ಪದಾರ್ಥಗಳು ರಫ್ತು ಯೋಗ್ಯವೆಂದು ಗುರುತಿಸಲಾಗಿದೆ.

ಇ) ಸರ್ಕಾರ ನೀಡುತ್ತಿರುವ ಸೌಲಭ್ಯ ಮತ್ತು ಪ್ರೋತ್ಸಾಹದ ವಿವರಗಳು:

1. ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಗಳಿಗೆ ರಫ್ತು ವಲಯಗಳನ್ನು ಭಾರತ ಸರಕಾರದ ಸಹಯೋಗದೊಂದಿಗೆ ಸ್ಥಾಪಿಸಿದೆ. ಹಾಗೂ ಮಾವು, ದ್ರಾಕ್ಷಿ, ವೆನಿಲ್ಲಾ, ದಾಳಿಂಬೆ, ನಿಂಬೆ, ಔಷಧೀಯ ಹಾಗೂ ಸುಗಂಧದ್ರವ್ಯ ಬೆಳೆಗಳಿಗೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2. ರಫ್ತು ಉತ್ತೇಜನ ನೀತಿ (2002–2007) ಯನ್ನು ಪ್ರಕಟಿಸಿದೆ.

3. ಕೇಂದ್ರ ಸರ್ಕಾರದ ಅಸೈಡ್ ಯೋಜನೆಯ ಅಡಿಯಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರಗಳು, ವಿಂಗಡಣೆ, ವಾಷಿಂಗ್, ಪ್ಯಾಕಿಂಗ್ ಸೌಲಭ್ಯ, ಹವಾನಿಯಂತ್ರಿತ ಸಾಗಾಣಿಕೆ, ಪ್ರೀಕೂಲಿಂಗ್, ಶೀತಲಗೃಹಗಳು, ಮಧ್ಯಂತರ ಶೀತಲ ಗೃಹಗಳು, ಸಂಸ್ಕರಣ ಘಟಕಗಳು ಮತ್ತು ರಫ್ತು ಸಂಕೀರ್ಣಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

4. ಪುಷ್ಪೋದ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.

6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ. ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.

7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ರೂ. 1/– ರಂತೆ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೆಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣ ಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ, ಶೇಖರಣೆ ಹಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಧಾರವಾಡ ಮಹಾನಗರದಲ್ಲಿ ರೈತ ಸಂತೆಯನ್ನು ಪ್ರಾರಂಭಿಸುವ ಬಗ್ಗೆ

4208 (4930) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಮಹಾನಗರದಲ್ಲಿ ರೈತ ಸಂತೆ ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ; ಹಾಗಾದರೆ ಸಂತೆ ನಡೆಸಲು ಅವಶ್ಯಕವಾದ ಮೂಲಭೂತ ಸೌಕರ್ಯಗಳೇನು;

ಆ) ಧಾರವಾಡ ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ರೈತರ ಮಾಹಿತಿ ಇದೆಯೇ; ಇದ್ದರೆ, ಮಾಹಿತಿ ಯಾವ ರೀತಿ ಪಡೆಯಲಾಗಿದೆ;

ಇ) ಧಾರವಾಡ ನಗರದ ಮಧ್ಯವರ್ತಿ ಮಾರುಕಟ್ಟೆಯಲ್ಲಿ ಸಂತೆ ನಡೆಸಲು ನಗರ ವಾಹನ ನಿಲ್ದಾಣ ಪಡೆದರೆ ಸೂಕ್ತ ಆಗಬಹುದೇ; ಅಥವಾ ಬೇರೆ ಯವ ಸ್ಥಳ ಪಡೆಯಲಾಗುವುದು;

ಈ) ನಗರದ ಮಧ್ಯದಲ್ಲಿ ಸಂಪರ್ಕ ಸ್ಥಳಗಳಲ್ಲಿ ಸರ್ಕಾರದ ನಿವೇಶನಗಳು ಇರುವುದನ್ನು ಗುರುತಿಸಿ ರೈತ ಸಂತೆ ಪ್ರಾರಂಬಿಸಲಾಗುವುದೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು, ರೈತರ ಸಂತೆಯನ್ನು ಸ್ಥಾಪಿಸುವ ಬಗ್ಗೆ ಸಮೀಕ್ಷೆ ವರದಿ ನೀಡಲು ಧಾರವಾಡ ಕೃಷಿ ವಿಶ್ವವಿದ್ಯಾಲಯ ಇವರನ್ನು ಕೋರಲಾಗಿದೆ. ಸಮೀಕ್ಷೆ ವರದಿ ಪರಿಶೀಲಿಸಿ ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯಲ್ಲಿ ಈ ಮಾಹಿತಿಯನ್ನು ಪಡೆಯಲಾಗುವುದು.

ಇ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಈ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಕೂಡಲ ಸಂಗಮದ ಜಲಾನಯನ ಪ್ರದೇಶದ ಬಸವಸಾಗರದಲ್ಲಿ ಮೊಸಳೆಗಳ ಹಾವಳಿ

4209 (4839) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ)ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಡಲಸಂಗಮದ ಜಲಾನಯನ ಪ್ರದೇಶ ಬಸವಸಾಗರವೆಂದು ನಾಮಕರಣವಾದ ಮೇಲೆ ಆ ಪ್ರಕಾರ ದಾಖಲೆಗಳಲ್ಲಿ ಎಂದು ನಮೂದಿಸಲಾಗಿದೆ; ಹಾಗಿದ್ದಲ್ಲಿ ಅದರ ಸುತ್ತಲೂ ನಾಮಫಲಕಗಳನ್ನು ಯಾಕೆ ನಿರ್ಮಿಸಿರುವುದಿಲ್ಲ?

ಆ)ಬಸವಸಾಗರದ ಜಲಾನಯನ ಪ್ರದೇಶದಲ್ಲಿ ಮೊಸಳೆಗಳು ಇರುವುದು ನಿಜವೇ; ಅದರಲ್ಲಿ ಈವರೆಗೆ ಎಷ್ಟು ಜನರ ಜೀವ ಆಹುತಿಯಾಗಿದೆ; ಆಹುತಿಯಾದ ಸಂಖ್ಯೆ ವಿವರ ನೀಡುವುದು;

ಇ) ಕೂಡಲಸಂಗಮ ಈಗ ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿದೆ ಪವಿತ್ರವಾದ ಬಸವಸಾಗರ ನೀರಿನಲ್ಲಿ ಸ್ನಾನ ಮಾಡಲು ನೀರಿನ ಸುತ್ತಲೂ ಮೆಟ್ಟಿಲುಗಳ ಕಟ್ಟೆಗಳನ್ನು ನಿರ್ಮಿಸುವುದು ಅವಶ್ಯಕವಲ್ಲವೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) 1982–83 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯವನ್ನು "ಬಸವ ಸಾಗರ" ಎಂದು ನಾಮಕರಣ ಮಾಡಲಾಗಿದ್ದು, ಈ ಜಲಾಶಯದ ಮೇಲೆ ಮತ್ತು ಜಲಾಶಯಕ್ಕೆ ಬರುವ ಕೂಡು ರಸ್ತೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ನಾಮಫಲಕಗಳನ್ನು ನಿರ್ಮಿಸಲಾಗಿದೆ.